# ಸಮಸ್ಯೆ ಮುಂದೂಡಬೇಡಿ



ಬಿಂದು ಮತ್ತು ಭಾಸ್ಕರ್ ಬಾಲ್ಯ ಸ್ನೇಹಿತರು. ಅವರಿಬ್ಬರೂ ಓದಿದ್ದು, ಬೆಳೆದಿದ್ದು ಎಲ್ಲ ಒಟ್ಟೊಟ್ಟಿಗೆ. ಒಬ್ಬರು ಇನ್ನೊಬ್ಬರಿಗಾಗಿ ಹುಟ್ಟಿದ್ದಾರೇನೋ ಎನ್ನುವ ಹಾಗೆ ಇದ್ದರು. ಇಬ್ಬರೂ ಪ್ರೀತಿಸುತ್ತಿರುವುದರ ಬಗೆಗೆ ಇಬ್ಬರ ಮನೆಗಳಲ್ಲೂ ಯಾವುದೇ ಆಕ್ಷೇಪವೂ ಇರಲಿಲ್ಲ. ಅವರಿಬ್ಬರೂ ಸದಾ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇರುವುದಿಲ್ಲ ಎನ್ನುವ ಹಾಗೆ ಇದ್ದರು. ಇಬ್ಬರೂ ಗಂಟೆ ಗಟ್ಟಲೆ ಕುಳಿತು ಮುಂದಿನ ಜೀವನದ ಬಗೆಗೆ ಸುಂದರವಾದ ಕನಸುಗಳನ್ನು ಹೆಣೆಯುತ್ತಿದ್ದರು. ಉದ್ಯೋಗ, ಮದುವೆ, ಮನೆ ಹಾಗೆಯೇ ಎಷ್ಟು ಮಕ್ಕಳಿರಬೇಕು ಎನ್ನುವುದರ ಬಗೆಗೂ ಮಾತು ಹೊರಳುತ್ತಿತ್ತು. ಮಕ್ಕಳ ವಿಷಯ ಬಂದಾಗ ಬಿಂದು ಗಾಬರಿಯಿಂದ ಬೆವರುತ್ತಿದ್ದಳು. ಅವರಿಬ್ಬರು ಲೈಂಗಿಕ ವಿಷಯವಾಗಿ ಮಾತನಾಡುವುದು ಅಪರೂಪವಾಗಿತ್ತು. ಬಿಂದುವಿಗೆ ಇಂತಹ ವಿಷಯಗಳ ಬಗೆಗೆ ಮಾತನಾಡುವುದು ಇಷ್ಟವಾಗುತ್ತಿರಲಿಲ್ಲ.

ಬಿಂದುವಿನ ವರ್ತನೆ ಹೀಗಿರುವುದಕ್ಕೆ ಕಾರಣವೂ ಇದೆ. ಬಿಂದುವಿಗೆ ಅವಳ ವಾರಿಗೆಯ ಹುಡುಗಿಯರಿಗೆ ಆಗುವ ಹಾಗೆ ತಿಂಗಳು ತಿಂಗಳು ಮುಟ್ಟು ಆಗುತ್ತಿರಲಿಲ್ಲ. ಈ ತೊಂದರೆಯನ್ನು ಬಿಂದು ಯಾರ ಬಳಿಯೂ ಹೇಳಿಕೊಳ್ಳಲಿಲ್ಲ. ತನಗೆ ಮುಟ್ಟಾಗುತ್ತಿಲ್ಲ ಎನ್ನುವುದು ಗೊತ್ತಾದರೆ ವೈದ್ಯರ ಬಳಿಗೆ ಕರೆದೊಯ್ಯುತ್ತಾರೆ, ತಪಾಸಣೆ, ಏನೇನೋ ಚಿಕಿತ್ಸೆ ಹೀಗೆ ಯೋಚಿಸಿದ ಬಿಂದು ಪ್ರತಿ ತಿಂಗಳೂ ಮುಟ್ಟಾಗುತ್ತಿದೆ ಎಂದು ಸುಳ್ಳು ಹೇಳಿದ್ದಳು. ಬಿಂದು ಅವರ ಅಮ್ಮ ಕೆಲಸಕ್ಕೆ ಹೋಗುವವರು. ಅವರಿಗೆ ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಲು ಆಗಲೇ ಇಲ್ಲ. ಈಗ ಮದುವೆ ಆಗುತ್ತಿರುವುದು ಇಬ್ಬರೂ ಪರಸ್ಪರ ಪ್ರೇಮಿಸುತ್ತಿರುವ, ಅತ್ಯಂತ ಆಪ್ತನಾದ ಭಾಸ್ಕರನನ್ನು. ಹೇಗೋ ಮುಂದೆ ನೋಡಿಕೊಂಡರಾಯಿತು. ಮಗುವಾಗುವುದಕ್ಕೆ ತೊಂದರೆ ಆದಾಗ ವೈದ್ಯರಲ್ಲಿ ತೋರಿಸಿದರಾಯಿತು. ಈಗೇಕೆ ಚಿಂತಿಸಬೇಕು ಎನ್ನುವ ಧೈರ್ಯ ತಾಳಿದ ಬಿಂದು ಮದುವೆಯಲ್ಲೂ ಉತ್ಸಾಹ, ಉಲ್ಲಾಸದಿಂದಲೇ ಇದ್ದಳು. ಬಹಳ ಸಂಭ್ರಮದಿಂದಲೇ ಮದುವೆಯೂ ಆಯಿತು. ಮದುವೆಯ ನಂತರದ ಲೈಂಗಿಕ ಜೀವನ ತೃಪ್ತಿಕರವಾಗಿ ಇರಲಿಲ್ಲ. ಲೈಂಗಿಕ ಜೀವನ ನಡೆಸುವುದೇ ಕಷ್ಟಸಾಧ್ಯವಾಗಿತ್ತು. ಮೊದ ಮೊದಲು ಇದಕ್ಕೆ ಭಯ, ನಾಚಿಕೆ ಇತ್ಯಾದಿ ಕಾರಣ ಇರಬಹುದು ಎಂದು ಅಂದುಕೊಂಡರು. ಆದರೆ ಸತ್ಯ ಹೊರಬರಲೇ ಬೇಕಿತ್ತು. ಪರಿಹಾರ ಕೋರಿ ಅವರಿಬ್ಬರೂ ವೈದ್ಯರಲ್ಲಿ ಬರಲೇ ಬೇಕಿತ್ತು. ಅವರು ಐವಿಎಫ್ ಸೆಂಟರ್ ಗೆ ಬಂದಾಗ ಆತಂಕದ ಮುಖ ಹೊತ್ತು ಬಂದಿದ್ದರು. ಐವಿಎಫ್ ಸೆಂಟರ್ ಗೆ ಬಂದಾಗ ಎಲ್ಲರೀತಿಯ ಪರೀಕ್ಷೆಗಳು, ತಪಾಸಣೆಗಳು ನಡೆದವು. ಬೇರೆ ಬೇರೆ ರೀತಿಯ ಸ್ಕ್ಯಾನಿಂಗ್ ಆಯಿತು. ಸುದೀರ್ಘ ತಪಾಸಣೆಯ ನಂತರ ಗೊತ್ತಾಗಿದ್ದೇನೆಂದರೆ ಬಿಂದುವಿಗೆ **MRKH (meyer Rokitansky kuster Hauser)** ಸಿಂಡ್ರೋಮ್ ಇದೆ. ಇದೇನೆಂದರೆ ಅವಳ ಗರ್ಭಕೋಶ ಮತ್ತು ಯೋನಿ ಸರಿಯಾಗಿ ಬೆಳವಣಿಗೆ ಆಗಿರಲಿಲ್ಲ. ಇದನ್ನು ಅರಗಿಸಿಕೊಳ್ಳುವುದು ಸುಲಭ ಆಗಿರಲಿಲ್ಲ. ಮಧುಚಂದ್ರದ ಕನಸು ಕಾಣುತ್ತಿದ್ದ ದಂಪತಿಗಳಿಗೆ ಈ ಸತ್ಯವನ್ನು ಅರ್ಥಮಾಡಿಸುವುದು ನಮಗೂ ಸವಾಲಿನದಾಗಿತ್ತು. ಬರಸಿಡಿಲಿನಂತಹ ಸತ್ಯವನ್ನು ಅರಗಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಬಹುದಿನಗಳ ಆಪ್ತಸಮಾಲೋಚನೆಯ ನಂತರ, ಅವರ ಮನಸ್ಸು ತಿಳಿಯಾಗುತ್ತ ಬಂದಂತೆ

> **ಮಧುಚಂದ್ರದ ಕನಸು ಕಾಣುತ್ತಿದ್ದ ದಂಪತಿಗಳಿಗೆ ಈ ಸತ್ಯವನ್ನು ಅರ್ಥಮಾಡಿಸುವುದು ನಮಗೂ ಸವಾಲಿನದಾಗಿತ್ತು. ಬರಸಿಡಿಲಿನಂತಹ ವಾಸ್ತವಿಕತೆಯನ್ನು ಅರಗಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಬಹುದಿನಗಳ ಆಪ್ತಸಮಾಲೋಚನೆಯ ನಂತರ, ಅವರ ಮನಸ್ಸು ತಿಳಿಯಾಗುತ್ತ ಬಂದಂತೆ ಅವರ ಎದುರಿಗೆ ಇರುವ ಪರಿಹಾರವನ್ನು ಸೂಚಿಸಿದೆವು.**

ಅವರ ಎದುರಿಗೆ ಇರುವ ಪರಿಹಾರವನ್ನು ಸೂಚಿಸಿದೆವು.

ಬಿಂದುವಿಗೆ ಗರ್ಭಕೋಶ ಬೆಳೆದಿರದಿದ್ದರೂ ಅಂಡಾಣುವಿನ ಉತ್ಪತ್ತಿ ಇತ್ತು. ಅವಳ ಅಂಡಾಣುವನ್ನು ಪಡೆದು ಭಾಸ್ಕರ್ ಅವರ ವೀರ್ಯಾಣುವಿನೊಂದಿಗೆ ಬೆರೆಸಿ ಪ್ರಯೋಗಾಲಯದಲ್ಲಿ ಸಂಯೋಜನೆ ಗೊಳಿಸಿದ ಜೈಗೋಟ್, ಬಾಡಿಗೆ ತಾಯಿಯ ಗರ್ಭದಲ್ಲಿ ಬೆಳೆಯುವ ವ್ಯವಸ್ಥೆ ಮಾಡಲಾಯಿತು. ಅವರು ಮುದ್ದಾದ ಮಗುವನ್ನೂ ಪಡೆದರು. ಇಷ್ಟೇ ಅಲ್ಲ, ಪಾಲಕರಿರದ ಮಗುವಿಗೆ ಬಾಳು ಕೊಡುವುದಕ್ಕೆ ಇನ್ನೊಂದು ಮಗುವನ್ನು ದತ್ತು ಪಡೆದರು. ಈಗ ಅವರದ್ದು ನಾಲ್ಕು ಜನರಿರುವ ಸುಖೀ ಕುಟುಂಬ. ಚಿಕ್ಕ ವಯುಸ್ಸಿನಲ್ಲಿ ಹಾರ್ಮೋನಿನ ವ್ಯತ್ಯಾಸವೋ ಇನ್ನಿತರ ಕಾರಣಗಳಿಂದಲೋ ಹೀಗಾಗಬಹುದು. ಎಷ್ಟೋ ಸಂದರ್ಭದಲ್ಲಿ ಐವಿಎಫ್ ಯಶಸ್ಸು ಆಗದೇ ಇರಬಹುದು. ಪದೇ ಪದೇ ಗರ್ಭಪಾತ ಆಗಬಹುದು. ಹೀಗೆ ಗರ್ಭಕೋಶ, ಅಂಡಾಶಯದ ತೊಂದರೆ ಇವೆಲ್ಲ ಏನೇ ಇದ್ದರೂ ಅದನ್ನು ಸರಿಯಾಗಿ, ಸೂಕ್ತ ರೀತಿಯಲ್ಲಿ ಪತ್ತೆ ಹಚ್ಚಿ, ಅದಕ್ಕೆ ಶಸ್ತ್ರ ಚಿಕಿತ್ಸೆ ಕೂಡ ಮಾಡಬಹುದಾಗಿದೆ. ಈಗ ವೈದ್ಯಕೀಯ ವಿಜ್ಞಾನ ಬಹಳ ಸುಧಾರಿಸಿದ್ದು ಆತಂಕ ಪಡುವ ಅಗತ್ಯ ಇಲ್ಲವೇ ಇಲ್ಲ.

ನೆನಪಿಡಬೇಕಾದದ್ದು ಎಷ್ಟೇ ತಂತ್ರಜ್ಞಾನ ಮುಂದುವರಿದಿರಲಿ, ಸುಧಾರಣೆ ಆಗಿರಲಿ, ಸರಿಯಾದ ಸಮಯದಲ್ಲಿ, ಸರಿಯಾದ ವೈದ್ಯರಲ್ಲಿ ಚಿಕಿತ್ಸೆ ಪಡೆಯುವುದು ಅತ್ಯಗತ್ಯ.

## ಪ್ರಶ್ನೆ ಪರಿಹಾರ

**ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು? ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲ ತಜ್ಞ ವೈದ್ಯರು ಉತ್ತರಿಸುತ್ತಾರೆ.**

**ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ 210/ಎ, 50 ಅಡಿ ರಸ್ತೆ, 14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು-560 050 ದೂರವಾಣಿ/ಎಸ್‌ಎಂಎಸ್: 98869 15556**




ಡಾ.ಆಶಾ.ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್


**ಪ್ರಶ್ನೆ ಪರಿಹಾರ?**


Ph: 9886915556, 080-26673777


**ಸಮಸ್ಯೆಗಳು ಎದುರಾದಾಗ ನಾವು ಹೇಗೆ ಅದನ್ನು ಎದುರಿಸುತ್ತೇವೆ ಎನ್ನುವುದು ಮುಖ್ಯ. ಸರಿಯಾದ ಸಮಯದಲ್ಲಿ, ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ಅತ್ಯವಶ್ಯಕ. ಸಮಸ್ಯೆಯನ್ನು ಮುಂದೂಡುವುದು, ಹೇಗೋ ಎಲ್ಲ ಸರಿಹೋಗುತ್ತದೆ ಎನ್ನುವ ಸುಳ್ಳು ಭರವಸೆ ತಾಳುವ ಬದಲು, ಸೂಕ್ತ ಪರಿಹಾರ ಹುಡುಕಬೇಕು. ಮುಕ್ತ ಮನಸ್ಸಿನಿಂದ ಸಮಸ್ಯೆಯನ್ನು ನೋಡಿದಾಗ ; ಪರಿಹಾರದ ಹಲವು ದಾರಿಗಳು ತೆರೆಯುತ್ತವೆ.**